# ನಿಸ್ಪೂದನೆ

## ಬೆಂಗಳೂರಿಗೆ ಅಂಟಿದ ಸಂಚಾರ ದಟ್ಟಣೆ ಶಾಪ ಶಾಶ್ವತ ಪರಿಹಾರೋಪಾಯಗಳ ಚಿಂತನೆ ಅಗತ್ಯ

**ಸಂಚಾರ ದಟ್ಟಣೆಯು ಉದ್ಯಾನನಗರಿಯ ಬ್ರ್ಯಾಂಡ್ ಇಮೇಜಿಗೆ ಅಂಟಿರುವ ಕಳಂಕ. ಅದನ್ನು ಹೀಗೇ ಬಿಟ್ಟರೆ, 'ಎಲ್ಲವನ್ನೂ ಮಸಿ ನುಂಗಿತು' ಎಂಬ ಮಾತಿನಂತೆ ನಗರದ ಅನುಕೂಲಕರ ಮತ್ತು ಆಹ್ಲಾದಮಯ ಅಂಶಗಳನ್ನೆಲ್ಲ ಅದು ನುಂಗಿ ನೊಣೆಯುವುದರಲ್ಲಿ ಯಾವ ಅನುಮಾನವೂ ಇಲ್ಲ.**



ಈಶ್ವರ್

ಬೆಂಗಳೂರು ಮಹಾನಗರದ ಮುಂದಿರುವ ಬಹುದೊಡ್ಡ ಸವಾಲು– ಸಂಚಾರ ದಟ್ಟಣೆ. ಸಂಚಾರ ದಟ್ಟಣೆಯ ಸಮಸ್ಯೆಗೆ ಸಂಬಂಧಿಸಿದಂತೆ ನಗರದ ಪ್ರತಿಯೊಬ್ಬ ನಿವಾಸಿಯ ನೆನಪಿನ ಪುಟದಲ್ಲೂ ಯಾವುದೋ ಒಂದು ಬಗೆಯ ಕಹಿ ಅನುಭವ ದಾಖಲಾಗಿಯೇ ಇರುತ್ತದೆ. ವಾಹನಗಳ ದಟ್ಟಣೆಯು ಆ ಮಟ್ಟಿಗೆ ರಾಜಧಾನಿ ನಿವಾಸಿಗಳ ಬದುಕನ್ನು ಕಾಡಲಾರಂಭಿಸಿದೆ. ಅಷ್ಟೇ ಅಲ್ಲ, ನಾಗರಿಕರ ಅಮೂಲ್ಯ ಸಮಯವನ್ನು ಕಬಳಿಸುತ್ತಿದೆ. ಅವರ ನೆಮ್ಮದಿ, ಆರೋಗ್ಯ ಮತ್ತು ಕಾರ್ಯದಕ್ಷತೆಯ ಮೇಲೂ ಪರಿಣಾಮ ಬೀರುತ್ತಿದೆ.

ವಾಹನಗಳ ಸಂಚಾರವು ನಗರದ ರಸ್ತೆಗಳ ತಾಳಿಕೆಯ ಸಾಮರ್ಥ್ಯವನ್ನು ಮೀರಿ ಬಹಳ ಸಮಯ ಆಗಿದೆ. ಆದರೂ ಹೊಸದಾಗಿ ರಸ್ತೆಗಿಳಿಯುವ ವಾಹನಗಳ ಸಂಖ್ಯೆಗೆ ಲಗಾಮು ಬಿದ್ದಿಲ್ಲ. ರಸ್ತೆಗಳಲ್ಲಿ ತುಳುಕುವ ವಾಹನಗಳಲ್ಲಿ ಸಿಂಹಪಾಲು ದ್ವಿಚಕ್ರ ವಾಹನಗಳದು. ಅವುಗಳ ಪಾಲು ಸುಮಾರು ಶೇಕಡಾ 70ರಷ್ಟು. ಆನಂತರ ಹೆಚ್ಚಿಗೆ ಕಾಣಸಿಗುವುದು ಕಾರುಗಳು. ಮನೆಗೆ ಒಂದಾದರೂ ದ್ವಿಚಕ್ರ ವಾಹನ ಬೇಕೇಬೇಕು ಎಂಬಂತಹ ಸ್ಥಿತಿ ಇದೆ. ಅದಕ್ಕೆ ಬೇರೆ ಬೇರೆ ಕಾರಣಗಳೂ ಇವೆ.

ಮನೆಯಲ್ಲಿ ಕಾರು ಇದ್ದರೂ ಎಲ್ಲೆಡೆಗೂ ಅದನ್ನು ಒಯ್ಯಲು ಆಗುವುದಿಲ್ಲ. ಕಿರಿದಾದ ರಸ್ತೆಗಳು, ಹೇಗೋ ನುಸುಳಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಪಾರ್ಕಿಂಗ್ ಸಮಸ್ಯೆಯು ಭೂತಾಕಾರ ತಳೆದಿದೆ. ಈ ಬಗೆಯ ಅನೇಕ ಅನನುಕೂಲಗಳಿಂದಾಗಿ ಕೆಲವರು ಒಲ್ಲದ ಮನಸ್ಸಿನಿಂದಲೇ ದ್ವಿಚಕ್ರ ವಾಹನದ ಮೊರೆ ಹೋಗುತ್ತಾರೆ. ಇನ್ನು ಪಡ್ಡೆಹೈಕಳಿಗೆ ಬೈಕ್ ಸವಾರಿ ಅಚ್ಚುಮೆಚ್ಚು ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ತಾರುಣ್ಯದ ಚಂಚಲ ಸ್ವಭಾವವು ಕೆಲವರಲ್ಲಿ ಬೈಕ್ ಓಡಿಸುವುದರಲ್ಲೂ ಪ್ರತಿಫಲನ ಆಗುವುದರ ಪರಿಣಾಮ ಎಲ್ಲರಿಗೂ ಗೊತ್ತೇ ಇದೆ.

ಅಡ್ಡಾದಿಡ್ಡಿ ವಾಹನ ಚಲಾವಣೆಯ ದುಷ್ಪರಿಣಾಮವು ಆ ನಿರ್ದಿಷ್ಟ ಚಾಲಕನಿಗಷ್ಟೇ ತಟ್ಟುವುದಿಲ್ಲ. ಆ ಕೆಟ್ಟ ಗಳಿಗೆಗೆ ಸಾಕ್ಷಿಯಾದ ಇತರ ಕೆಲವು ವಾಹನ ಸವಾರರು ಹಾಗೂ ಪಾದಚಾರಿಗಳ ಜೀವಕ್ಕೂ ಕುತ್ತು ತರಬಹುದಾದ ಸಾಧ್ಯತೆ ಇರುತ್ತದೆ. ಈ ವರ್ಷದ ಜನವರಿ ಒಂದೇ ತಿಂಗಳಲ್ಲಿ ಬೆಂಗಳೂರಿನಲ್ಲಿ ಒಟ್ಟು 432 ಅಪಘಾತಗಳು ಸಂಭವಿಸಿದ್ದು, ಆ ಅಪಘಾತಗಳ ಕಾರಣದಿಂದಾಗಿ 90 ಮಂದಿ ಜೀವ ಕಳೆದುಕೊಂಡಿದ್ದಾರೆ ಎಂದು ವರದಿಯಾಗಿದೆ. ಮೃತಪಟ್ಟವರ ಪೈಕಿ ಶೇಕಡಾ 40ರಷ್ಟು ಮಂದಿ ಬೈಕ್ ಸವಾರರು ಎಂಬುದನ್ನು ಗಮನಿಸಿದರೆ, ದ್ವಿಚಕ್ರ ವಾಹನ ಸವಾರಿ ಎಷ್ಟು ಅಪಾಯಕಾರಿಯಾಗಿ ಪರಿಣಮಿಸಿದೆ ಎಂಬುದು ಅರ್ಥವಾಗುತ್ತದೆ.

ಅತಿವೇಗ, ರಸ್ತೆಗಳ ನಿರ್ವಹಣೆಯಲ್ಲಿನ ವೈಫಲ್ಯ, ಸಂಚಾರ ನಿಯಮ ಪಾಲಿಸದಿರುವುದು, ಹೆಲ್ಮೆಟ್ ಧರಿಸದಿರುವುದು, ನಿರ್ಲಕ್ಷ್ಯ, ಕಿವಿಗೆ ಮೊಬೈಲ್ ಫೋನ್ ತಾಗಿಸಿಕೊಂಡು ವಾಹನ ಓಡಿಸುವುದು, ಪಾದಚಾರಿ ಮಾರ್ಗಗಳ ಲಭ್ಯತೆ ಇಲ್ಲದಿರುವುದು ಮತ್ತು ಇದ್ದರೂ ಅವುಗಳು ಸುಸ್ಥಿತಿಯಲ್ಲಿ ಇಲ್ಲದ ಕಾರಣಕ್ಕೆ ಪಾದಚಾರಿಗಳು ರಸ್ತೆಯಲ್ಲಿ ಅಡ್ಡಾಡಬೇಕಾದಂತಹ ಸ್ಥಿತಿ... ಇಂತಹ ಅನೇಕ ಕಾರಣಗಳಿಂದಾಗಿ ಅಪಘಾತಗಳು ಸಂಭವಿಸುತ್ತವೆ.

ನಗರದ ಜನಸಂಖ್ಯೆ ಮತ್ತು ಆ ಸಂಖ್ಯೆಗೆ ತಕ್ಕಂತೆ ವಾಹನಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆ ಮಾತ್ರ ಇದ್ದಂತೆಯೇ ಇದೆ. 'ನಮ್ಮ ಮೆಟ್ರೊ' ನಗರದ ನಿವಾಸಿಗಳು ತುಸು ನಿರಾಳವಾಗಿ ಉಸಿರಾಡುವಂತೆ ಮಾಡಿದೆಯಾದರೂ ಮೆಟ್ರೊ ಸಂಪರ್ಕಜಾಲ ಇನ್ನೂ ಎಲ್ಲ ಕಡೆಗೂ ವಿಸ್ತರಣೆಯಾಗಿಲ್ಲ. ಮೆಟ್ರೊ ಕಾಮಗಾರಿಗಳು ಅನೇಕ ಕಡೆ ಕುಂಟುತ್ತಾ ಸಾಗಿವೆ. ಸಂಚಾರ ದಟ್ಟಣೆ ಹೆಚ್ಚಲು ಅವು ಕೂಡ ಕಾರಣವಾಗಿವೆ. ಕಾಮಗಾರಿಗಳಿಗೆ ವೇಗ ತುಂಬುವುದು ಇಂದಿನ ತುರ್ತು. ಬಿಎಂಟಿಸಿ ಬಸ್‌ಗಳು ಬೆಳಿಗ್ಗೆ ಮತ್ತು ಸಂಜೆಯ ಬೇಡಿಕೆಯ ಸಮಯದಲ್ಲಿ ಕಿಕ್ಕಿರಿದು ತುಂಬಿರುತ್ತವೆ. ಬಸ್‌ಗಳ ಸಂಖ್ಯೆ ಹೆಚ್ಚಿಸುವುದರ ಜೊತೆಗೆ ಬಸ್ ಪ್ರಯಾಣವನ್ನು ಇನ್ನಷ್ಟು ಸುವ್ಯವಸ್ಥೆಗೊಳಿಸಿ, ಜನಸ್ನೇಹಿ ಮಾಡುವುದರತ್ತ ಸರ್ಕಾರ ಗಮನಹರಿಸಬೇಕು.

ಸಂಚಾರ ದಟ್ಟಣೆಯು ಈಗಾಗಲೇ ಸವಾರರ ನೆಮ್ಮದಿ ಕೆಡಿಸಿದೆ. ಹೊರಗಿನಿಂದ ಬಂದು–ಹೋಗುವವರಿಗೂ ಅದರ ಬಿಸಿ ತಟ್ಟಿದ್ದು, ಉದ್ಯಾನನಗರಿಯ ಬ್ರ್ಯಾಂಡ್ ಇಮೇಜಿಗೆ ಕಳಂಕ ಅಂಟಿಸಿದೆ. ಅದನ್ನು ಹೀಗೇ ಬಿಟ್ಟರೆ, 'ಎಲ್ಲವನ್ನೂ ಮಸಿ ನುಂಗಿತು' ಎಂಬ ಮಾತಿನಂತೆ ನಗರದ ಅನುಕೂಲಕರ ಮತ್ತು ಆಹ್ಲಾದಮಯ ಅಂಶಗಳನ್ನೆಲ್ಲ ಅದು ನುಂಗಿ ನೊಣೆಯುವುದರಲ್ಲಿ ಯಾವ ಅನುಮಾನವೂ ಇಲ್ಲ. ತೇಪೆ ಹೆಚ್ಚುವ ಕೆಲಸಗಳಿಂದ ಪ್ರಯೋಜನವಿಲ್ಲ ಎಂಬುದು ಸಾಬೀತಾಗಿದೆ. ಶಾಶ್ವತ ಪರಿಹಾರೋಪಾಯಗಳ ಬಗೆಗೆ ಸರ್ಕಾರ ಈಗಲಾದರೂ ಗಂಭೀರವಾಗಿ ಯೋಚಿಸುವುದೇ? ಯೋಚಿಸಿದರೆ ಒಳ್ಳೆಯದು. ಇಲ್ಲದೇ ಹೋದರೆ ಸರ್ಕಾರದ ಮೇಲೆ ಅಂತಹುದೊಂದು ಒತ್ತಡ ಸೃಷ್ಟಿಸುವ ಕೆಲಸ ಪ್ರಜ್ಞಾವಂತ ನಾಗರಿಕ ವಲಯಗಳಿಂದ ಆಗಬೇಕಿದೆ.

■ ಎನ್‌. ಉದಯಕುಮಾರ್